ಅಧ್ಯಕ್ಷರು : ಅವರು ಹೇಳಿದರು. ಅದನ್ನೇ ನಾನು ಹೇಳಿದ್ದು. you must hear him properly.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಇರಲಿಲ್ಲ. ಅಲ್ಲಿಂದ ಈ ಪ್ರಶ್ನೆ ಮುಗಿದಮೇಲೆ ಸಿ.ಎಂ ಅವರ ಛೇಂಬರ್‌ನಲ್ಲಿ ಅವರು ಬೇಟಿಯಾಗಿದ್ದರು. ಅಲ್ಲಿಗೆ ಹೋದಾಗ ನಾನು ಹೇಳಿದೆ ಅವರಿಗೆ ಈ ರೀತಿ ಪ್ರಸ್ತಾವನೆ ಬಂದಿತ್ತು, ಎಂ ರಾಮಸ್ವಾಮಿಯವರು, ಶಿವರಾಂರವರು ಪ್ರಸ್ತಾಪ ಮಾಡಿದರು. ತಾವು ಇರಲಿಲ್ಲ. ತಮ್ಮಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿ ಉಪಾಧ್ಯಕ್ಷರು ಹೇಳಿದರು. ಈಗಾಗಲೇ ನಾನು ಜಾಹಿಂಟ್ ರಿಜಿಸ್ಟ್ರಾರ್‌ಗೆ ನಿರ್ದೇಶನ ಕೊಟ್ಟಿದ್ದೇನೆ, ಆ ಬ್ಯಾಂಕ್ ರಿಜಿಸ್ಟರ್ ಮಾಡಿ ಎಂದು ಹೇಳಿ. ಅದು ಎರಡು-ಮೂರು ದಿವಸದಲ್ಲಿ ಅದಷ್ಟು ಬೇಗನೆ ಮಾಡಿಸುತ್ತೇನೆ ಎಂದು ಅವರು ನನಗೆ ಈಗಾಗಲೇ ಹೇಳಿದ್ದಾರೆ. ಅದರ ಪ್ರಕಾರ ಅವರೂ ಕೂಡ ಈಗ ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ನಾವೆಲ್ಲಾಕೂಡ ಚರ್ಚೆ ಮಾಡಿದ್ದೇವೆ. ಮಾಡಿ ಅದರ ಪ್ರಕಾರ ಹೇಳಿದ್ದೇವೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನೀವು ಯಾವಾಗ ಎದ್ದರೂ ಅಧಿಕಾರ ದುರುಪಯೋಗ, ಸ್ವಜನ ಪಕ್ಷಪಾತ ಎಂದು ಹೇಳುತ್ತೀರಿ.

ಅಧ್ಯಕ್ಷರು : ತಮಾಷೆಯಾಗಿ ಹೇಳಿದೆ. ನಿಮಗೆ ಯಾರಿಗೂ ಹಾಸ್ಯಪ್ರವೃತ್ತಿ ಇಲ್ಲವೆ? ಕೊಟ್ಟು ತೆಗೆದುಕೊಳ್ಳುವುದು ಇರುತ್ತದೆ. ಸೀರಿಯಸ್ ಆಗಿ ಇರುತ್ತಿರಲ್ಲಾ. ನಿಮ್ಮ ಹಾಸನದವರ ಹತ್ತಿರ ನಾನು ಇನ್ನೇನು ವಿಚಾರ ಮಾತನಾಡಲಿ ಹೇಳಿ. ಮಾನ್ಯ ವಾಟಾಳ್‌ನಾಗರಾಜ್‌ರವರೇ, ಇಸ್ಕೂರ್‌ದು ಎರಡೂ ಮುಗಿಸೋಣ. ಒಂದು ಸಭಾಪತಿಯವರ ಕೇಸ್, ತಲೆ ತಪ್ಪಿಸಿಕೊಂಡಿದ್ದಾರೆ ಎಂದು ಹೇಳಿದರಲ್ಲಾ. ಇವೆರಡು ಮುಗಿದ ಮೇಲೆ ಆಮೇಲೆ ನಿಮ್ಮದು ಹಕ್ಕುಚ್ಯುತಿ ನಿರ್ಣಯದ ಬಗ್ಗೆ ತೆಗೆದುಕೊಳ್ಳೋಣ.

13. ಹಕ್ಕು ಚ್ಯುತಿ

ಸನ್ಮಾನ್ಯ ಸದಸ್ಯರಾದ ಶ್ರೀ ಸಭಾಪತಿಯವರ ಮೇಲೆ ಜಯಿರಾಮ ಶೆಟ್ಟಿ ಯವರ ಮೇಲೆ ಕೇಸ್ ದಾಖಲಾಗಿರುವ ಹೇಳಿಕೆ

ಶ್ರೀ ಎಂ. ಸಿ. ನಾಣಯ್ಯ : ಕಾನೂನು ಮತ್ತು ಸಂದೀಯ ಸಚಿವರು : ಮಾನ್ಯ ಅಧ್ಯಕ್ಷರೇ, ಕುಂದಾಪುರ ಪೋಲೀಸ್‌ನವರು ಅಪರಾಧ ಸಂಖ್ಯೆ : 225:95 (ಸಿಸಿ ನಂ. 745:96) ರ ದೋಷಾರೋಪಣ ಪಟ್ಟಿಯನ್ನು ಕುಂದಾಪುರ ಎ. ಎಂ. ಮತ್ತು ಜೆ. ಎಫ್. ಎಂ. ಸಿ. ನ್ಯಾಯಾಲಯದ ಮುಂದೆ 2-2-96ರಂದು ಸಲ್ಲಿಸಿದ್ದರು. ಇದರ ಬಗ್ಗೆ ಮೊಕದ್ದಮೆಯನ್ನು 10-4-96ರಲ್ಲಿ ಜೆ.ಎಫ್.ಎಂ.ಸಿ. ನ್ಯಾಯಾಲಯದಲ್ಲಿ ವಿಚಾರಣೆಗೆ

ನಿಗದಿ ಮಾಡಿದ್ದರು. ಅಂದು ಅಪಾದಿತರಾದ ಶ್ರೀ ಐ. ಎಂ. ಜಯರಾಂ ಶೆಟ್ಟಿ, ಶಾಸಕರು, ಬೈಂದೂರು ಮತ್ತು ಶ್ರೀ ಯು. ಆರ್. ಸಭಾಪತಿ, ಶಾಸಕರು, ಉಡುಪಿ ಮತ್ತು ಶ್ರೀ ಜಯರಾಂಶೆಟ್ಟಿ ಕರಕುಂಟೆ ಗ್ರಾಮ, ಶ್ರೀ ವಿನಾಯಕ ಶೆಟ್ಟಿ, ಮೂಡಲಕಟ್ಟೆ, ಕುಂದಾಪುರ ಗ್ರಾಮ ಮತ್ತು ಇತರರು ನ್ಯಾಯಾಲಯದಲ್ಲಿ ಹಾಜರಿರಲಿಲ್ಲ. ದೋಷಾರೋಪಣ ಪಟ್ಟಿಯ ನಮೂನೆ ಕಲಂ(2) ರಲ್ಲಿ ತಲೆ ಮರೆಸಿಕೊಂಡವರು ಸೇರಿದಂತೆ ಬಂಧಿಸಿರಲಿ ಅಥವಾ ಬಂಧಿಸದಿರಲಿ ವಿಚಾರಣೆಗೆ ಒಪ್ಪಿಸಿಲ್ಲದ ಆಪಾದಿತರ ಹೆಸರುಗಳನ್ನು ಮತ್ತು ವಿಳಾಸಗಳನ್ನು ಈ ಕಲಂನಲ್ಲಿ ನಮೂದಿಸಬೇಕು. ವಿಚಾರಣೆ ದಿವಸ ಅಪರಾಧಿಗಳನ್ನು ವಿಚಾರಣೆಗೆ ಒಪ್ಪಿಸಿಲ್ಲದ ಕಾರಣ ಕಲಂ (2)ರಲ್ಲಿ ಎಲ್ಲಾ ಆಪಾದಿತರ ಹೆಸರುಗಳನ್ನು ನಮೂದಿಸಲಾಯಿತು. ಅಂದು ವಿಚಾರಣೆಗೆ ಅವರು ಹಾಜರಿಲ್ಲದ ಕಾರಣ ಇವರಿಗೆ ಜಾಮೀನಿಲ್ಲದ ಬಂಧನದ ವಾರಂಟ್‌ನ್ನು ನ್ಯಾಯಾಧೀಶರು ಜಾರಿಮಾಡಲು ಆದೇಶ ಹೊರಡಿಸಿದರು. ಆಪಾದಿತರಲ್ಲಿ ಶಾಸಕರನ್ನು ಬಿಟ್ಟು ಇತರರು ನ್ಯಾಯಾಲಯಕ್ಕೆ ಹಾಜರಾಗಿ ಜಮೀನು ಪಡೆದು ಕೊಂಡರು. ಜಾಮೀನಿಲ್ಲದ ಬಂಧನದ ವಾರಂಟನ್ನು ಮೊತ್ತೊಮ್ಮೆ ಆದೇಶಿಸಿ 10-9-96 ರೊಳಗಡೆ ಇದನ್ನು ಜಾರಿಗೊಳಿಸಿ ನ್ಯಾಯಾಲಯಕ್ಕೆ ಒಪ್ಪಿಸಲು ನ್ಯಾಯಧೀಶರು ಆದೇಶ ಹೊರಡಿಸಿದರು. ಆ ದಿನವೂ ಸಹ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಲಿಲ್ಲ. ಆಗ ಮತ್ತೊಂದು ಸಲ ಆದೆಶ ಹೊರಡಿಸಿ ಬೆಂಗಳೂರು ನಗರ ಪೋಲೀಸ್ ಆಯುಕ್ತರ ಮೂಲಕ ಜಾರಿಗೊಳಿಸಿ 5-11-96 ರಂದು ಈ ಆದೇಶ ನೀಡಿದರು. 5-11-96 ರಂದು ಈ ಆದೇಶವನ್ನು ಹಿಂದಿರುಗಿಸಲಿಲ್ಲ. ಆಗ ನ್ಯಾಯಧೀಶರು ಮತ್ತೊಮ್ಮೆ ಮತ್ತೊಂದು ಆದೇಶ ಹೊರಡಿಸಿ ಪೋಲೀಸ್ ಮಹಾ ನಿರ್ದೇಶಕರ ಮೂಲಕ ಜಾರಿ ಮಾಡುವಂತೆ ಆದೇಶಿಸಿದರು ಮತ್ತು ಇದನ್ನು ಜಾರಿಗೊಳಿಸಿ ನ್ಯಾಯಾಲಯಕ್ಕೆ 6-1-97 ರಂದು ಹಿಂದಿರುಗಿಸಲು ಆದೇಶ ನೀಡಿದರು. 6-1-97 ರಂದು ಎ.ಪಿ.ಪಿ.ಯವರು ನ್ಯಾಯಾಧೀಶರ ಗಮನಕ್ಕೆ ಒಂದು ಸುತ್ತೋಲೆಯನ್ನು ತಂದು ಶಾಸಕರನ್ನು ಬಂಧಿಸುವ ಬಗ್ಗೆ ಮೊದಲು ಒಂದು ಪತ್ರವನ್ನು ಮಾನ್ಯ ಸಭಾಧ್ಯಕ್ಷರಿಗೆ ಬರೆಯುವ ಬಗ್ಗೆ ತಿಳಿಸಿದರು. ಹಾಗೆಯೇ ನ್ಯಾಯಧೀಶರು ಮಾನ್ಯ ಸಭಾಧ್ಯಕ್ಷರಿಗೆ ಒಂದು ಪತ್ರವನ್ನು 6-1-97ರಂದು ಬರೆದರು. 24-1-97 ರಂದು ಮತ್ತೆ ವಿಚಾರಣೆಗೆ ತೆಗೆದುಕೊಂಡಾಗ ಮಾನ್ಯ ಸಭಾಧ್ಯಕ್ಷರಿಂದ ಉತ್ತರ ಬಂದಿತ್ತು. ಆಗ ನ್ಯಾಯಾಧೀಶರು ಮತ್ತೊಮ್ಮೆ ಬಂಧನದ ಆದೇಶವನ್ನು ಹೊರಡಿಸಿ ಅದನ್ನು ಪೋಲೀಸ್ ಉಪ ವಿಭಾಗಾಧಿಕಾರಿಯವರ ಮೂಲಕ ಜಾರಿಗೊಳಿಸಿ 12-2-97 ರಂದು ಹಿಂದಿರುಗಿಸುವಂತೆ ಆದೇಶ ಹೊರಡಿಸಿದರು 12-2-97 ರಂದು ಹಿಂದುರುಗಿಸುವಂತೆ ಆದೇಶ ಹೊರಡಿಸಿದರು. 12-2-97 ರಂದು ಇನ್‌ಚಾರ್ಜ್ ಪೋಲೀಸ್‌ಉಪ ವಿಭಾಗಾಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಿದ್ದು ಅದನ್ನು ಜಾರಿಗೊಳಿಸಲು ಸ್ವಲ್ಪ ಕಾಲಾವಕಾಶ ಬೇಡಿದರು. ಆಗ ನ್ಯಾಯಾಧೀಶರು ಪೋಲೀಸರ ಅವಿಧೇಯತೆಯನ್ನು

ಗಮನಿಸಿ ಬಹಳ ತೀವ್ರವಾಗಿ ಟೀಕೆಯನ್ನು ಮಾಡಿ ಬಂಧನದ ಆದೇಶವನ್ನು ಮತ್ತೆ ಹೊರಡಿಸಿ 3-3-97 ರಂದು ನ್ಯಾಯಾಲಯಕ್ಕೆ ಒಪ್ಪಿಸಲು ಆದೇಶ ಹೊರಡಿಸಿದರು. ಮತ್ತು ಮೊಕದ್ದಮೆಯನ್ನು 3-3-97 ರಂದು ವಿಚಾರಣೆಗೆ ಮಂದೂಡಿದರು ಮತ್ತು ವಿಚಾರಣೆಯ ದಿನದಂದು ಪೋಲೀಸು ಉಪ ವಿಭಾಗಾಧಿಕಾರಿಯವರು ಖುದ್ದಾಗಿ ನ್ಯಾಯಾಧೀಶರ ಮುಂದೆ ಹಾಜರಿರುವಂತೆ ಆದೇಶಿಸಿದರು. ಈ ಪ್ರಕರಣದ ತೀವ್ರತೆಯನ್ನು ಗಮನಿಸಿ ಉಡುಪಿ ವೃತ್ತ ನಿರೀಕ್ಷಕರು ಮಾನ್ಯ ಶಾಸಕರನ್ನು ಭೇಟಿ ಮಾಡಿ ನ್ಯಾಯಾಲಯದ ಆದೇಶ ಮತ್ತು ಆದೇಶದ ತೀವ್ರತೆ ಮತ್ತು ಇದರಿಂದಾಗಿ ಉಂಟಾದ ಪರಿಸ್ಥಿತಿಯನ್ನು ತಿಳಿಸಿದಾಗ ಬಂಧಿತಗೊಂಡು ನ್ಯಾಯಾಲಯದ ಮುಂದೆ ಹಾಜರಿರುವುದಾಗಿ ಒಪ್ಪಿಕೊಂಡರು ಮತ್ತು ಅವರು ಇದರ ಬಗ್ಗೆ ನ್ಯಾಯಾಲಯದಲ್ಲಿ ಜಾಮೀನು ಪಡೆದುಕೊಳ್ಳುವುದಾಗಿ ತಿಳಿಸಿದರು. ಬ್ರಹ್ಮಾವರ ಸಾರ್ವಜನಿಕ ಸಮಾರಂಭದಲ್ಲಿ ಪಾಲುಗೊಳ್ಳುವುದರಿಂದ ಸಮಾರಂಭ ಮುಗಿದ ನಂತರ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಲು ಕೇಳಿಕೊಂಡರು. ಸಮಾರಂಭ ಮುಗಿದ ಮೇಲೆ ಶಾಸಕರು ತಾವು ನ್ಯಾಯಾಂಗ ಬಂಧನಕ್ಕೆ ಹೋಗಲು ಮತ್ತು ಜಾಮೀನು ಪಡೆದುಕೊಳ್ಳಲು ನಿರಾಕರಿಸಿದರು. ಈ ಮೊಕದ್ದಮೆಯನ್ನು ಹಿತಂಗೆದುಕೊಳ್ಳುವ ಸರ್ಕಾರದ ಆದೇಶ 3-3-97 ರಂದು ಸಂಜೆ ಉಡುಪಿ ಪೋಲೀಸರಿಗೆ ಮುಟ್ಟಿತು. ಕೂಡಲೇ ಅವರು ಎ.ಪಿ.ಪಿ.ಯವರ ಮೂಲಕ ಕುಂದಾಪುರ ನ್ಯಾಯಾಲಯದಲ್ಲಿ ಹಾಜರು ಪಡಿಸಿ ಮೊಕದ್ದಮೆಯನ್ನು ಅವರು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿ ಕೇಳಿದ್ದಾರೆ. ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯ ನ್ಯಾಯಾಲಯದ ಪರಿಶೀಲನೆಯಲ್ಲಿ ಇದೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ತಾವು ನಮಗೆ ರಕ್ಷಣೆ ಕೊಡಬೇಕು. ನಾನು ಅವರ ಹೇಳಿಕೆಯನ್ನು ನಿಮ್ಮ ವಿವೇಚನೆಗೆ ಬಿಟ್ಟಿದ್ದೇನೆ. ಈ ಸದನದ ಒಬ್ಬ ಗೌರವಾನ್ವಿತ ಸದಸ್ಯನನ್ನು ಬಂಧಿಸಿದಾಗ ನಾನು ಮ್ಯಾಜಿಸ್ಟ್ರೇಟರ್ ಸಮ್ಮುಖದಲ್ಲಿ ನಾನು ಸ್ಪಷ್ಟವಾಗಿ ಕೇಳಿದ್ದೇನೆ. ತಾವು ನನಗೆ ಸಮನ್ಸ್‌ನ್ನು ಜಾರಿಗೊಳಿಸದೆ ನನಗೆ ಬಂಧನದ ವಾರಂಟನ್ನು ಹೇಗೆ ನೀವು ನೀಡಿದ್ದೀರಿ ಎನ್ನುವುದನ್ನು ಕೇಳಿದೆ. ಆಗ ಮ್ಯಾಸ್ಟ್ರೇಟರು ಅಲ್ಲಿ ಏನು ಹೇಳಿದರು ಎಂದರೆ ಪೋಲೀಸರ ವರದಿ ಪ್ರಕಾರ ನೀವು ತಲೆ ಮರೆಸಿಕೊಂಡಿದ್ದೀರಿ ಎಂದು.

ಅಧ್ಯಕ್ಷರು : ಅವರು ಹೇಳಿದರಲ್ಲಾ ಪ್ರೋಫಾರ್ಮ ಇರುತ್ತದಲ್ಲಾ ಪೋಲೀಸ್ ಸ್ಟೇಷನ್‌ನಲ್ಲಿ ಆ ಪ್ರೊಫಾರ್ಮದಲ್ಲಿ ಬಂಧಿಸಿದರೆ ಬಂಧಿಸಿ ಹಾಜರ್‌ಪಡಿಸಿದ್ದೇವೆ ಎಂದು ತೋರಿಸಬೇಕು. ನೀವು ಹಾಜರಾಗೇ ಇದ್ದಾಗ ಆರೋಪಿಗಳು ಹಾಜರಾಗದೇ ಇದ್ದಾಗ ಆ ಕಲಂನಲ್ಲಿ ಪ್ರಿಂಟ್ ಮಾಡಿರುತ್ತಾರೆ. ಆದರಿಂದ ಅಟೊಮ್ಯಾಟಿಕ್ ಆಗಿ ಅದು ಹೋಗುತ್ತದೆ. ನಾನೂ ಕೂಡ ಅವತ್ತು ಮಾತನಾಡಿದಾಗ ನನಗೆ ಈ ವಿಚಾರ ಗೊತ್ತಿರಲಿಲ್ಲ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಒಂದು ಕ್ರಿಮಿನಲ್ ಕೇಸನ್ನು ಅಲ್ಲಿ ದಾಖಲೆಮಾಡಿದಮೇಲೆ ಮ್ಯಾಜಿಸ್ಟ್ರೇಟ್‌ರು ನಮಗೆ ಸಮನ್ಸ್ ಇಷ್ಯೂ ಮಾಡುವಂಥ ಕ್ರಮ ಇದೆ ತಾನೇ? ಆ ಸಮನ್ಸ್‌ನ್ನು ನಮಗೆ ಜಾರಿಗೊ ಸದಿದ್ದರೆ ನಾವು ಹೇಗೆ ಹಾಜರಾಗುವುದು? ನಾವು ಹಾಜರಾಗುವುದು ಹೇಗೆ? ಈ ಪರಿಸ್ಥಿತಿಯನ್ನು ಹೇಳಿ.

M. C. Nanaiah : In a warrant case, in a congnisable offence, the magistrate can either issue summons or issue non-bailable warrant. It is a right of the court.

ಅಧ್ಯಕ್ಷರು : ಸರ್ಕಾರದ ಲೋಪ ಮಾನ್ಯ ಮೊಯಿಲಿಯವರು ಮತ್ತು ಮಾನ್ಯ ವೈ. ರಾಮಕೃಷ್ಣನವರಿಗೆ ಗೊತ್ತಿದೆ.

ಹೋಂ ಸೆಕ್ರೆಟರಿ ಬಂದು ನನ್ನ ಭೇಟಿಯಾಗಿ ಈ ಪ್ರಿಂಟೆಡ್ ಪ್ರೊಫಾರ್ಮ್ ಏನು ಇರುತ್ತದೆಯಲ್ಲಾ, ಆ ಕಾಲಂನಲ್ಲಿ ನಮೂದು ಮಾಡಿರುತ್ತಾರೆ. ಇಲ್ಲಾ ಅಕ್ಯೂಸ್ಡ್‌ನ್ನು ಪ್ರೆಸೆಂಟ್ ಮಾಡಬೇಕು. ಪ್ರೆಸೆಂಟ್ ಇಲ್ಲದಿದ್ದರೆ ಇನ್ನೊಂದು ಕಾಲಂ ಪಕ್ಕದಲ್ಲಿರುತ್ತದೆ. ಅವರು ಅಬ್‌ಸ್ಕೌಂಡಿಂಗ್ ಎಂತಲೂ ತೋರಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಬಗ್ಗೆ ನಮಗೆ ಅನುಭವ ಇದೆ. ಪ್ರೊಫಾರ್ಮ ಇದೆ ಎಂಬುದನ್ನು ಒಪ್ಪುತ್ತೇನೆ. ಆದರೆ ವಾರೆಂಟ್ ಕೇಸ್‌ನಲ್ಲಿ ಅವರು ಹೇಳಿದ ಪ್ರಕಾರ ವಾರೆಂಟೇ ಇಷ್ಯೂ ಮಾಡಬೇಕಾಗಿಲ್ಲ. ಮ್ಯಾಜಿಸ್ಟ್ರೇಟ್‌ರವರು ಸಮನ್ಸ್ ಕೂಡ ಇಷ್ಯೂ ಮಾಡಬಹುದು. ಈಗ ಆ ಸ್ಟೇಜ್‌ನಲ್ಲಿ ಮಾತನಾಡುತ್ತಿದ್ದೇನೆ. ಯಾವಾಗ ಅದು ಮ್ಯಾಜಿಸ್ಟ್ರೇಟ್‌ರ ಕೋರ್ಟಿಗೆ ಹೋಗಿದೆಯೋ, ಆಗ ಮ್ಯಾಜಿಸ್ಟ್ರೇಟ್‌ರವರು ಅದರ ಬಗ್ಗೆ ಅವರ ವಿವೇಚನೆಯಿಂದ ಕ್ರಮ ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ ಸಾವಿಲ್ಲ, ಕೋರ್ಟ್‌ನ ವಿಚಾರವನ್ನು ಪ್ರಶ್ನೆ ಮಾಡುವಂತಿಲ್ಲ. ಆದರೆ ಇಲ್ಲಿ ಎಲ್ಲಿ ಪ್ರಾರಂಭವಾಯಿತು ಎಂದು ಹೇಳಿದರೆ ಚಾರ್ಜ್ ಷೀಟ್ ಆ ನಮೂನೆ ಏನಿದೆ, ಅದರಲ್ಲಿ ಹೆಚ್ಚಾಗಿ ಏನು ಹಾಕುತ್ತಾರೆ ಎಂದು ಹೇಳಿದರೆ arrested ಎಂದು ಹಾಕುತ್ತಾರೆ. ಕೆಳಗಡೆ ಷರಾ ಬರೆಯಬೇಕು. column ಅದನ್ನು ಹಾಗೇ ಬಿಡುವುದಲ್ಲ. ಅಥವಾ absconding ಎಂದು ಹೇಳಿ ಬರೆಯುತ್ತಾರೆ. not arrested ಎಂದು ಬರೆಯಲಿಕ್ಕೂ ಅವಕಾಶ ಇದೆ. That is the procedure

ಅಧ್ಯಕ್ಷರು : ಆ ರೀತಿ ಪ್ರೊಸೀಜರ್ ಇದೆಯೇ? can you get that form?

ಶ್ರೀ ಎಂ. ವೀರಪ್ಪ ಮೊಯಿಲಿ : ಸಭಾಧ್ಯಕ್ಷರೇ, That is the procedure ಏಕೆ ಹೇಗೆ ಮಾಡುತ್ತೀರಿ ಸುಮ್ಮನೆ? ಈಗ ಅದರಲ್ಲಿ ಪ್ರಿಂಟೆಡ್

ಶ್ರೀ ಎಂ. ಸಿ. ನಾಣಯ್ಯ : ಈ ಪ್ರಕರಣದಲ್ಲಿ ಒಟ್ಟು ಏಳು ಜನ ಇದ್ದಾರೆ. ಇವರಿಬ್ಬರೂ ಸೇರಿ ಒಟ್ಟು 7 ಜನ. ಇವರಲ್ಲಿ ಯಾರೊಬ್ಬರಿಗೂ ಸಮನ್ಸ್ ಸರ್ವೆ ಆಗಲಿಲ್ಲ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನಿಮಗೆ ಏಕೆ ಸಮನ್ಸ್ ಇಷ್ಯೂ ಮಾಡಲಿಲ್ಲ ಎಂದು ಕೋರ್ಟಿಗೆ ಹೋಗಿ ಕೇಳಿ. ನೀವು ಮಾಡಿರತಕ್ಕ ಕೆಲಸವನ್ನು ನಾನೇನಾದರೂ ಮಾಡಿದಂತಹ ಸಂದರ್ಭ ಬಂದರೆ ನಾನು ಹಾಗೆಯೇ ಅದನ್ನು ಎದುರಿಸುತ್ತೇನೆ. ಆ ಗ ನಾನೂ ಕೂಡ ಕೋರ್ಟಿಗೆ ಹೋಗಬೇಕಾಗುತ್ತದೆ. ಕಾನೂನು ಎಲ್ಲರಿಗೂ ಒಂದೇ. ನಾನೂ ಹೋಗಲೇಬೇಕಾಗುತ್ತದೆ.

ಅಧ್ಯಕ್ಷರು : ಅದು ಬೇರೆ ವಿಷಯ. ಮಾನ್ಯ ಜಯರಾಮ್‌ರವರೇ, ನಿಮಗೆ ಗೊತ್ತಿಲ್ಲ. ನೀವು ಒಳ್ಳೆಯವರು, ನೀವು ಕುಳಿತುಕೊಳ್ಳಿ. ನಿಮಗೆ ಇದರ ಇಂಪ್ಲಿಕೇಷನ್ಸ್ ಅರ್ಥವಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಕೋರ್ಟಿನಲ್ಲಿ ಬಂದ ಮೇಲೆ ಆದಂತಹ ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ. ಚಾರ್ಜ್ ಷೀಟ್ ಹಾಕುವಾಗ, ಒಬ್ಬ ಎಂ.ಎಲ್.ಎ. ಯನ್ನು ಅವರು absconding ಆಗಿದ್ದಾರೆ ಎಂದು ಚಾರ್ಜ್ ಷೀಟ್ ಹಾಕತಕ್ಕಾಂಥದ್ದು ದೊಡ್ಡ ಅಪರಾಧ. It shows arrogancy.

Mr. Speaker : I was more agitated than what you are. ನಾವು ನಾಳೆ ನಾಡಿದ್ದು ಬೇಕಾದರೆ I request the Home Secretary to come and meet him. Kindly freshen up your memory. By seeing that printed proforma then you will come to know what is the truth. Because I have seen it just day before yesterday.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, I am fresh in my memory because I have handled number of cases. Even now I am handling. I know the column.

It is a printed column. You go through it. see

Mr. Speaker : I was under the impression that it is under civil law.

ಶ್ರೀ ಎಂ. ವೀರಪ್ಪ ಮೊಯಿಲಿ : ನೋ, ಅದು ಕಾಲಂನಲ್ಲಿದೆ. ಆ ಕಾಲಂನಲ್ಲಿ ಒಂದು arrested ಎಂದು ಬರೆಯುತ್ತಾರೆ, ಇಲ್ಲದಿದ್ದರೆ absconding ಎಂದು ಬರೆಯುತ್ತಾರೆ, ಇಲ್ಲದಿದ್ದರೆ Dot arrested ಎಂದು ಬರೆಯುತ್ತಾರೆ.

Mr. Speaker : all right. If there is a cognisable offence, how can the officer substantiate by making an entry that not arestad?

ಶ್ರೀ ಎಂ. ವೀರಪ್ಪ ಮೊಯಿಲಿ : ಆ ರೀತಿ ಬರೆಯಬಹುದು. It can be done

ಅಧ್ಯಕ್ಷರು : ಹೇಗೆ?

Sri. M. Veerappa Moily : I am not arguing for the argument's sake. Any amount of such charge sheets, I will show to you.

ಶ್ರೀ ಎಂ. ಪಿ. ಪ್ರಕಾಶ್: ಅಲ್ಲಿ ಏನಾಗುತ್ತದೆ ಅಂದರೆ absconding ಅಂದರೆ ಆ ಮನುಷ್ಯ ತಲೆ ಮರೆಸಿಕೊಂಡಿರುತ್ತಾನೆ ಎನ್ನುವುದು ಆಗುತ್ತದೆ. ಆ ಕಾಲಂನಲ್ಲಿ ಏನಾಗುತ್ತದೆ ಅಂದರೆ usually ತುಂಬಾ ಗೌರವಾನ್ವಿತರಾದಂತಹವರನ್ನು ಹೋಗಿ ಆರೆಸ್ಟ್ ಮಾಡಲಿಕ್ಕೆ ಇರಿಸು ಮುರಿಸು ಎಂದು ಆಗುತ್ತದೆ ಎಂದು ಅವರು ಏನು ಮಾಡುತ್ತಾರೆ ಎಂದರೆ, ಅವರು absconding ಎಂದು ಬರೆಯುತ್ತಾರೆ ಅದು ಆಗದೇ ಇದ್ದರೆ not arrested ಎಂದು ಬರೆಯಬೇಕು ಅಥವಾ we are making/efforts to arrest ಎಂದು ಬರೆಯಬೇಕು. ಇದು ವಸ್ತುಸ್ಥಿತಿ.

ಅಧ್ಯಕ್ಷರು : ಅಷ್ಟು ಸೀರೀಸ್ ಆಫ್ ಡೇಟ್ಸ್‌ನಲ್ಲಿ ಅವರು ಸಮನ್ಸ್ ಸರ್ವೆ ಮಾಡಿರುವುದೇ that is to show due respect to the legislator ಅವರಿಗೆ embarass ಮಾಡಬಾರದು, ಆ ತರಹ ಆಗಲೀ ಎನ್ನುವ ದೃಷ್ಟಿಯಿಂದ

ಶ್ರೀ ಎಂ. ವೀರಪ್ಪ ಮೊಯಿಲಿ : ಇಲ್ಲಿ ಇಲ್ಲಿ ದೊಡ್ಡ ಅಪರಾಧ ಆಯಿತು ಎಂದು ಹೇಳಿದರೆ ಒಬ್ಬ ಶಾಸಕರನ್ನು absconding ಒಂದು ವೇಳೆ ಅವರಿಗೆ ಆರೆಸ್ಟೇ ಮಾಡಬೇಕೆಂದರೆ ಅವರನ್ನು ಆರೆಸ್ಟ್ ಮಾಡಬಹುದಾಗಿತ್ತು. ಹೆಚ್ಚಾಗಿ ಒಂದು ಹಂತದವರೆಗೆ ತಪ್ಪಿಸಿಕೊಳ್ಳುವುದಿಲ್ಲ ಎಂದು ಹೇಳಿದರೆ not arrested ಎಂದು ಹೇಳಿ ತಪ್ಪಿಸಿಕೊಳ್ಳುವುದಿಲ್ಲ. submit the charge sheet.

ಅಧ್ಯಕ್ಷರು : ಅವರು ಹುಡುಕಿಕೊಂಡು ಬಂದು ನೀವು ಎಲ್ಲಿ ಇದ್ದಿರಿ ಅಲ್ಲಿ ಕರೆದು ಕೊಂಡು ಬಂದು ನಿಮ್ಮನ್ನು ಕೋರ್ಟ್‌ಗೆ ಪ್ರೊಡ್ಯೂಸ್ ಮಾಡಿದ್ದರೆ ನಿಮಗೆ ಅಪಮಾನ ಮಾಡಿದಂತಾಗುತ್ತಿತ್ತು. ಅಷ್ಟು ಡೇಟ್ಸ್‌ನಲ್ಲಿ ಅವರುನಿಮ್ಮ ಮೇಲೆ ಸರ್ವ್ ಮಾಡದೇ ಅವಾಯ್ಡ್

ಮಾಡಿಕೊಂಡು ತಿರುಗಿದ್ದಾರೆ ಅಂದರೆ ಶಾಸಕರು ಇದ್ದೀರಿ, ನಿಮಗೆ ಗೌರವ ತೋರಿಸಬೇಕು, ಇದು ಏನಾದರೂ ಗೌರ್ನಮೆಂಟ್‌ನಲ್ಲಿ ಇತ್ಯರ್ಥ ಆಗುತ್ತದೆ ಎನ್ನುವ ಸದುದ್ದೇಶದಿಂದಲೇ ಅವರು ಅವಾಯ್ಡ್ ಮಾಡಿಕೊಂಡು ಹೋಗಿದ್ದಾರೆ. ಅದಕ್ಕೆ ಇನ್ನೊಂದು ಬಣ್ಣ ಹಾಕುವುದು ಬೇಡ. ಅಷ್ಟೊಂದು ಅವಕಾಶ ಸಿಕ್ಕರೂ ಕೂಡ They have not served it ಅಂದರೆ ಸರ್ಕಾರದ ಉದ್ದೇಶ ಅರ್ಥಮಾಡಿಕೊಳ್ಳಬೇಕು rather the intention of the police ಅರ್ಥಮಾಡಿಕೊಳ್ಳಬೇಕು.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನನ್ನ ಮೂಲಭೂತವಾದ ಒಂದು ಪ್ರಶ್ನೆಗೆ ತಾವು ಉತ್ತರಿಸಲೇ ಇಲ್ಲ.

ಅಧ್ಯಕ್ಷರು : ಆ ಮೂಲಭೂತವಾದ ಪ್ರಶ್ನೆಯನ್ನು ನೆಕ್ಸ್ಟ್ ಸೆಷನ್‌ಗೆ ತೆಗೆದುಕೊಳ್ಳೋಣ ಈಗ ಅದುಬೇಡ.

ಶ್ರೀ ಯು. ಆರ್. ಸಭಾಪತಿ : ಹಾಗಲ್ಲ ಸಾರ್, ಇಲ್ಲಿ ಈ ಸದನದಲ್ಲಿ ಕಂದಾಯ ಸಚಿವರು ವಿಭಾಗೀಯ ಕಮೀಷನರ್‌ರಿಂದ ತನಿಖೆ ಮಾಡಿದ ಮೇಲೆ ನಮ್ಮ ಮೇಲೆ ಮೊಕದ್ದಮೆ ಹೂಡುವುದಿದ್ದರೂ ಆಮೇಲೆ ತೀರ್ಮಾನ ಮಾಡುತ್ತೇವೆ ಎಂದು ಹೇಳಿ ವಚನ ಕೊಟ್ಟು ಮೇಲೆ ನಮ್ಮ ಮೇಲೆ ಮೊಕದ್ದಮೆ ಹೂಡಿಸಿದ್ದು ಯಾರು? ಮೊಕದ್ದಮೆ ಹೂಡಲಿಕ್ಕೆ ಕಾರಣರು ಯಾರು? ಅಧ್ಯಕ್ಷರೇ ನೀವೇ ವಿವೇಚನಗೆ ತೆಗೆದುಕೊಳ್ಳಿ. ವಿಭಾಗೀಯ ಕಮೀಷನರ್‌ರವರಿಂದ ತನಿಖೆ ಮಾಡಿಸುತ್ತೇವೆ ಎಂದು

ಅಧ್ಯಕ್ಷರು : ನಾನು ಇಂಟರ್‌ಫಿಯರ್ ಆಗಿದ್ದುದು ಮಾನ್ಯ ಜಯರಾಂ ಶೆಟ್ಟಿಯವರು ಮತ್ತು ತಮ್ಮ ಮೇಲೆ ಇದ್ದ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುವಷ್ಟರ ಮಟ್ಟಕ್ಕೆ ನನ್ನ ಪ್ರವೇಶ ಇದ್ದಿದ್ದು. ನಾನು ಅಲ್ಲಿಗೇ ನಿಲ್ಲುತ್ತೇನೆ. ಉಳಿದಿದ್ದು, ನೀವು ಏಕೆ ಹೋದಿರಿ, ಅರವು ಏಕೆ ಹೋದರು? ಅವರು ಏನು ಹೇಳಿದರು, ಅದೆಲ್ಲಾ in between you and the Government.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ಸದನದ ಹಕ್ಕು ಚ್ಯುತಿ ಪ್ರಶ್ನೆ ಬರುತ್ತದೆ.

ಶ್ರೀ ಎಂ. ಸಿ. ನಾಣಯ್ಯ : ನಾವು ಆದೇಶ ಕೊಟ್ಟ ದಿವಸ, ಅದೇ ದಿವಸ ಹೋಮ್ ಸೆಕ್ರೆಟರಿಯವರನ್ನು ಕರೆಸಿ ನಾನು..

ಅಧ್ಯಕ್ಷರು : ಶಾಸಕರಿಗೆ ಗೌರವ ಕೊಡಿಸುವುದಕ್ಕೂ ನನಗೆ ಇತಿಮಿತಿ ಇರುತ್ತದೆ.

ಶ್ರೀ ಯು. ಆರ್. ಸಭಾಪತಿ : ನನಗೆ ನ್ಯಾಯ ಕೊಡಿ. ಮಾನ್ಯ ಕಂದಾಯ ಸಚಿವರು ವಿಭಾಗೀಯ ಕಮೀಷನರ್‌ರವರಿಂದ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದರು.ಅವರು ವಿಭಾಗೀಯ ಕಮೀಷನರ್‌ರವರಿಂದ ತನಿಖೆ ಮಾಡಿಸದೇ ನಮ್ಮ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದರೆ ಈ ಸದನದ ಹಕ್ಕು ಚ್ಯುತಿ ಆದಂತೆ ಅಲ್ಲವೇ ಎನ್ನುವುದಕ್ಕೆ ನೀವು ಉತ್ತರ ಕೊಡಿ.

ಅಧ್ಯಕ್ಷರು : ನೀವು ಹಾಗೆ ಹೇಳಿದರೆ ಕೊಡುವುದಕ್ಕಾಗುವುದಿಲ್ಲ. ನೀವು ನಿರ್ಣಯ ಚ್ಯುತಿ ನಿರ್ಣಯ ಮಂಡಿಸುತ್ತೇನೆ.

ಶ್ರೀ ಯು. ಆರ್. ಸಭಾಪತಿ : ಹಾಗದರೆ ನಾನು ಮುಂದಿನ ಅಧಿವೇಶನದಲ್ಲಿ ಹಕ್ಕು ಚ್ಯುತಿ ನಿರ್ಣಯ ಮಂಡಿಸುತ್ತೇನೆ.

ಅಧ್ಯಕ್ಷರು : ದಯಮಾಡಿ ಅದನ್ನು ಕಳುಹಿಸಿಕೊಡಿ. ನಿಮ್ಮನ್ನು ನಾನು ತಡೆ ಹಿಡಿದಿದ್ದೇನೆಯೇ? ಈಗ ಇನ್ನೊಂದು ಹಕ್ಕು ಚ್ಯುತಿ ರೆಡಿಯಾಗಿದೆ.

ಶ್ರೀ ಯು. ಆರ್. ಸುಭಾಪತಿ : ನಾನು ಅವತ್ತು ನಿಮ್ಮ ಜೊತೆಗೆ ದೂರವಾಣಿಯಲ್ಲಿ ಮಾತನಾಡಿದಾಗ ನೀವು ನನಗೆ ಒಂದು ಮಾತು ಹೇಳಿದಿರಿ. ನಿಮ್ಮನ್ನು ಅರೆಸ್ಟ್ ಮಾಡಿದರೆ ನನ್ನನ್ನೇ ಅರೆಸ್ಟ್ ಮಾಡಿದ ಹಾಗೆ ಎಂದು ನೀವು ಹೇಳಿದಿರಿ. ಇವತ್ತು ಸರ್ಕಾರದ ನೀತಿ, ನಿಮಗೆ ಇದು ಗೌರವ ತರುತ್ತದೆ ಎಂದು ಹೇಳುವುದಾದರೆ ನಿಮಗೆ ಬಿಡುತ್ತೇನೆ, ತೀರ್ಮಾನ ನೀವೇ ತೆಗೆದುಕೊಳ್ಳಿ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಮಗೆ ನಿಮ್ಮ ಮೇಲೆ ತುಂಬಾ ಅಭಿಮಾನ ಇದೆ. ಆದರೆ ತಾವು ನಿಜವಾದ ಸತ್ಯ ಪರಿಶೀಲನೆ ಮಾಡುವುದರಲ್ಲಿ, ನಾನೀಗ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಯಾರಿಗೂ ಹೇಳಲಿಲ್ಲ. ಏಕೆಂದರೆ ಪೋಲೀಸರ್ ಅಧಿಕಾರಿಗಳು ನಮಗೆ ಗೌರವ ಕೊಟ್ಟಿದ್ದಾರೆ. ನಾನು ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಿಲ್ಲ. ಆದರೆ ನಮ್ಮ ಮೇಲೆ ಚಾರ್ಜ್ ಷೀಟ್ ಹಾಕುವಾಗ ನಾವು ತಲೆ ಮರೆಸಿಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಇದನ್ನು ಅವರು ಕಾನೂನು ತಜ್ಞರು ನಾವೇನೂ ಕಾನೂನು ಓದಿದವರಲ್ಲ. ಇದನ್ನು ಇನ್ನೊಂದು ತರಹದಲ್ಲಿ ಹೇಳುತ್ತಾರೆ. ನಾನು ತಮ್ಮೊಡನೆ ಕಳಕಳಿಯಿಂದ ಕೇಳುವುದೇನೆಂದರೆ, ನಾವು ಒಂದು ಸಣ್ಣ ತಪ್ಪು ಮಾಡಿದ್ದರೆ ನೀವು ಹತ್ತು ಪಟ್ಟು ಶಿಕ್ಷೆ ಕೊಡಿ. ನಾನು ಅನುಭವಿಸಲು ಸಿದ್ಧನಿದ್ದೇನೆ. ಆದರೆ ಅಂತಹ ಅಧಿಕಾರಿಗಳು ಶಾಸಕರುಗಳ ಮೇಲೆ ಈ ತರಹ ಕೇಸು ಹಾಕುವಾಗ ಅಲ್ಲಿನ ಸಾಮಾನ್ಯ ಜನರ ಗತಿ ಏನು? ಅಲ್ಲಿ ನಡೆಯುವಂಥದ್ದು ಏನು? ಇದರ ಹಿಂದೆಯಾವ ರಾಜಕಾರಣಿಗಳಿದ್ದಾರೆ? ಅಧಿಕಾರಿಗಳಿದ್ದಾರೆ ಎನ್ನುವ ಸತ್ಯಾಂಶವನ್ನು

ತಾವು ತಿಳಿಯಿರಿ. ಅದಿಲ್ಲದಿದ್ದರೆ ನಾವು ಕ್ಷೇತ್ರಕ್ಕೆ ಹೋಗಿ, ಇವತ್ತು ಒಂದು ಪಮಾಣಿಕವಾಗಿ ಜನಸೇವೆ ಮಾಡುವಂತಹ ಒಂದು ನೈತಿಕ ಹಕ್ಕು ನಮಗೆ ಹೋಗಿದೆ. ತಾವು ಇದನ್ನು ಆಲೋಚನೆ ಮಾಡಿ.

ಅಧ್ಯಕ್ಷರು : ಈಗಲೂ ಜನಸೇವೆ ಮಾಡಿ. ಜನಸೇವೆಯಲ್ಲಿ ಇದೆಲ್ಲಾ ಬರುತ್ತದೆ. ಯಾರ ಮೇಲೆ ಕೇಸುಗಳು ಇಲ್ಲ. ಜನಸೇವೆ ಜಾಸ್ತಿ ಮಾಡಿದಾಗಲೇ ಕೇಸುಗಳು ಜಾಸ್ತಿ ಬೀಳುತ್ತವೆ. ಈ ದೇಶದ ಪ್ರಧಾನ ಮಂತ್ರಿಗಳು ಆಗಿದ್ದವರಿಂದ ಮೊದಲ್ಗೊಂಡು, ನನ್ನ ಮತ್ತು ನಿಮ್ಮ ಮೇಲೆನಿಂದ ಹಿಡಿದು ಒಬ್ಬ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿರುವವರಿಗೂ ಕೇಸುಗಳು ಹಾಕುತ್ತಾರೆ. ಕೇಸುಗಳು ಹಾಕುತ್ತಾರೆ, ಹೋಗುತ್ತೇವೆ, ವಿಚಾರಣೆ ಎದುರಿಸುತ್ತೇವೆ, ಸಮಯ ಬಂದಾಗ ಸತ್ಯಾಸತ್ಯತೆ ಹೊರಬೀಳುತ್ತದೆ. ಅದಕ್ಕೆಲ್ಲಾ ಹೆದರಬಾರದು. ಸಾರ್ವಜನಿಕ ಜೀವನದಲ್ಲಿ ಇದ್ದಾಗ ಇದೆಲ್ಲವನ್ನೂ ನಾವು ಎದುರಿಸಬೇಕು. ಈಗೇನು ಕೇಸು ಹಿಂದಕ್ಕೆ ತೆಗೆದುಕೊಂಡಿದ್ದಾರಲ್ಲಾ ಆ ವಿಷಯ ಬಗ್ಗೆ ಇನ್ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ.

ಶ್ರೀ ಐ. ಎಂ. ಜಯರಾಮಶೆಟ್ಟಿ : ಇವತ್ತು ಅಧಿಕಾರಿಗಳೊಡನೆ ರಾಜಕಾರಣಿಗಳು ಶಾಮೀಲಾಗಿಕೊಂಡು ಇವತ್ತುಸತ್ಯ ಮುಚ್ಚಿಡುತ್ತಿದ್ದಾರೆ

ಅಧ್ಯಕ್ಷರು : ಈಗ ಆ ವಿಷಯವನ್ನು ಮುಕ್ತಾಯ ಮಾಡೋಣ.

2. ಈಸ್ಟೂರು ಗ್ರಾಮದಲ್ಲಿ ನಡೆದಂಥ ಘಟನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಮ್ಮ ಅಪ್ಪಣೆ ಪಡೆದು ಈಸ್ಟೂರು ಗ್ರಾಮದಲ್ಲಿ ನಡೆದಂತಹ ಒಂದು ಘಟನೆಯ ಬಗ್ಗೆ ಇವತ್ತು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಇದು ಬಹುಶಃ ನಾವು ಯಾವಾಗಲೂ ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಇಂತಹ ಘಟನೆಗಳು ನಡೆಯುತ್ತವೆ ಎಂದು ಹೇಳಿ ಪತ್ರಿಕೆಗಳಲ್ಲಿ ಓದುತಿರುತ್ತೇವೆ. ಆದರೆ ಇವತ್ತು ಅಂತಹ ಘಟನೆಗಳು ಸರ್ವೇ ಸಾಮಾನ್ಯವಾಗಿ ಬೆಂಗಳೂರು ಅಕ್ಕಪಕ್ಕದಲ್ಲಿ ಮತ್ತು ಬೆಂಗಳೂರು ಪಟ್ಟಣದಲ್ಲೂ ಕೂಡ ಇಂತಹ ಒಂದು ಘಟನೆಗಳು ನಡೆಯುತ್ತಲೇ ಇವೆ.

7 ಪಿ.ಎಂ

ಇಂತಹ ಘಟನೆಗಳು ನಡೆಯಬೇಕೆಂದರೆ ಒಂದು ರಾಜಕೀಯ ಪ್ರೇರಣೆ ಮತ್ತು ರಾಜಕೀಯ ಶಕ್ತಿ ಅವರ ಹಿಂದೆ ಇದೆ. ಇಲ್ಲದೆ ಹೋದರೆ ಬಹುಶಃ ಇಂತಹ ಒಂದು ಅತ್ಯಾಚಾರ ಮಾಡುವುದಕ್ಕೆ ಯಾರೂ ಕೂಡ ಮುಂದೆ ಬರುವುದಿಲ್ಲ. ಇಂತಹ ಅತ್ಯಾಚಾರ ನಡೆಯಬೇಕಾದರೆ, ಬೆಂಬಲ ಅಥವಾ ಸಹಾಯ, ಅಥವಾ ರಾಜಕೀಯ ಪ್ರೇರಣೆ